2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 60/2018

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರಕಾಶ | ಪಿಡಬ್ಲೂ - 08 |
| ತಂದೆಯ ಹೆಸರು | - ಈರೇಗೌಡ | ಸಿಡಬ್ಲೂ - 13 |
| ವಯಸ್ಸು | - 48 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಮಡೆನೇರಲು, ಕೆಳಗೂರು | |

ದಿನಾಂಕಃ **27.05.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತ ಗೊತ್ತು, ಆತ ನಮ್ಮ ಊರಿನವರು. ಮೃತ ವೆಂಕಟೇಶ ಮತ್ತು ಮೃತ ರುಕ್ಮಿಣಿ ನನ್ನ ಪರಿಚಯಸ್ಥರು. ಮೃತರು ಆರೋಪಿಗೆ ಅಣ್ಣ ಮತ್ತು ಅತ್ತಿಗೆ ಆಗಬೇಕು. ಚಾಸಾ.12 ಮತ್ತು 14 ನಮ್ಮ ಊರಿನವರು. ಚಾಸಾ.15 ಮತ್ತು 16 ರವರು ಮೃತರ ಮಕ್ಕಳು. ಚಾಸಾ.1 ಮೃತರ ಸಂಬಂಧಿ.

2. ಕಳೆದ ಏಳು ವರ್ಷ ನಾಲ್ಕು ತಿಂಗಳುಗಳ ಹಿಂದೆ ವೆಂಕಟೇಶ ಮತ್ತು ರುಕ್ಮಿಣಿ ವಿಷಯುಕ್ತ ಅಂಬಲಿ ಕುಡಿದು ಮರಣಹೊಂದಿದ್ದಾರೆ. ನಾನು ಮೃತರ ಶವ ನೋಡಲು ಮಣಿಪಾಲಿನ ಆಸ್ಪತ್ರೆಗೆ ಬೇಟಿ ನೀಡಿದ್ದೆ. ಅಲ್ಲಿ ಗೋಣಿಬೀಡು ಪೋಲೀಸರು ನಮ್ಮ ಸಮಕ್ಷಮ ಮೃತ ರುಕ್ಮಿಣಿಯ ಶವ ಪಂಚನಾಮೆ ಜರುಗಿಸಿದರು.

3. ಪೋಲೀಸರು ಮೃತರ ಸಾವಿನ ಕುರಿತು ವಿಚಾರಿಸಿದ್ದರು. ನಾನು ಪೋಲೀಸರು ವಿಚಾರಿಸಿದಾಗ ಆರೋಪಿತ ಅಂಬಲಿಯಲ್ಲಿ ವಿಷ ಹಾಕಿ ಮೃತರವನ್ನು ಸಾಯಿಸಿರುವುದಾಗಿ ನಮಗೆ ಗೊತ್ತಾದ ವಿಚಾರ

ತಿಳಿಸಿದೆನು. ಆರೋಪಿ ಹಾಗೂ ಮೃತರ ಮದ್ಯೆ ಆಸ್ತಿ ಕಲಹ ಇರುವುದನ್ನು ಪೋಲೀಸರಿಗೆ ತಿಳಿಸಿದ್ದೇನೆ.

4. ಪೋಲೀಸರು ಶವ ಪಂಚನಾಮೆ ಕಾಲದಲ್ಲಿ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.25 ಎಂದು ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯನ್ನು ನಿಪಿ.26 ಎಂದು ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲದಲ್ಲಿ ಪೋಲೀಸರು ಸಂಗ್ರಹಿಸಿದ ಭಾವಚಿತ್ರವನ್ನು ಈಗಾಗಲೇ ನಿಪಿ.6 ಮತ್ತು 7 ಎಂದು ಗುರುತಿಸಲಾಗಿದೆ. ಚಾಸಾ.12 ಮತ್ತು 14 ರವರು ನನ್ನೊಂದಿಗೆ ಮೇಲೆ ಹೇಳಿದ ದಾಖಲೆಗಳಿಗೆ ಸಹಿ ಮಾಡಿದ್ದಾರೆ.

<u>ಪಾಟೀ ಸವಾಲು: ಶ್ರೀ.ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿ ಪರವಾಗಿಃ</u>

5. ಚಾಸಾ.1 ರವರು ನಮ್ಮ ನೆರೆಮನೆಯವರು ಮತ್ತು ನನ್ನ ಸಂಬಂಧಿಕರು. ಘಟನೆ ನಡೆಯುವ ಮೊದಲು ನಾನು ಆರೋಪಿ ಹಾಗೂ ಮೃತರ ಮನೆಗೆ ಬೇಟಿ ನೀಡಿರಲಿಲ್ಲ. ಆರೋಪಿ ಹಾಗೂ ಮೃತರ ಮಧ್ಯದ ಜಮೀನು ತಕರಾರು ವಿಚಾರದಲ್ಲಿ ಪಂಚಾಯತಿ ಮಾಡಲು ನನ್ನನ್ನು ಕರೆದಿರಲಿಲ್ಲ. ಅಂಬಲಿಯಲ್ಲಿ ಇಲಿ ಪಾಷಾಣ ಹಾಕಿದ್ದಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

6. ಪಂಚನಾಮೆ ಕಾಲದಲ್ಲಿ ಹೀಗೇಯೇ ಪಂಚನಾಮೆ ಬರೆಯಬೇಕು ಎಂದು ಪೋಲೀಸರಿಗೆ ಹೇಳಿರುವುದಿಲ್ಲ. ಪಂಚನಾಮೆಯಲ್ಲಿ ಬರೆದ ವಿಚಾರದ ಬಗ್ಗೆ ನನಗೆ ವೈಯಕ್ತಿಕ

ಮಾಹಿತಿ ಇಲ್ಲ. ನಾನು ಸ್ಥಳೀಯ ಗ್ರಾಮ ಪಂಚಾಯತಿ ಸದಸ್ಯ ಅಥವ ಗ್ರಾಮದ ಮುಖಂಡನಲ್ಲ. ಮಹಜರು ಕಾಲದಲ್ಲಿ ನನ್ನನ್ನು ಚಾಸಾ.1 ರವರು ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ನಾನು ನೆರೆಹೊರೆಯವನಾದ ಕಾರಣ ಸ್ವತಃ ಆಸ್ಪತ್ರೆಗೆ ಬೇಟಿ ನೀಡಿದ್ದೆ. ನಿಪಿ.25 ಮತ್ತು 26 ರ ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ